

## ಬಿಂಗಣ್ಣನ ಕುಟುಂಬ

ಪಕ್ಷಿಗಳ ಫೋಟೊ ತೆಗೆಯುವ ಹವ್ಯಾಸ ಹೊಂದಿರುವ ನಾನು ರಾಯಚೂರಿನಿಂದ ಹತ್ತು ಕಿ.ಮೀ ದೂರದಲ್ಲಿರುವ ಏಗನೂರು ಗ್ರಾಮದ ರಸ್ತೆಯ ಇಕ್ಕೆಲಗಳಲ್ಲಿ ಪಕ್ಷಿಗಳು ಇರುವುದನ್ನು ಕಂಡು ಫೋಟೊ ತೆಗೆಯಲು ಮುಂದಾದೆ. ಪಕ್ಷಿಗಳು ನನ್ನನ್ನು ನೋಡಿದರೆ ಓಡಿಹೋಗುತ್ತವೆ. ಈ ಕಾರಣ ಬಾರೆಹಣ್ಣು ಗಿಡದ ಹಿಂದಕ್ಕೆ ಮರೆಯಾಗಿ ಫೋಟೊ ತೆಗೆಯಲು ಮುಂದಾದೆ. ಆಗ ಆ ಗಿಡದ ಎಲೆಗಳ ಕಡೆ ಗಮನ ಹೋಯಿತು. ಅಲ್ಲಿ ಎರಡು ಬಿಂಗಣ್ಣನ ಜೊತೆ ಹಲವಾರು ಮರಿಗಳು ಇದ್ದದ್ದು ಕಣ್ಣಿಗೆ ಬಿತ್ತು. ಅದೇ ರೀತಿ ಆ ಎರಡು ಬಿಂಗಣ್ಣಗಳು ಮತ್ತೆ ಸಂತಾನೋತ್ಪತ್ತಿ ಕಾರ್ಯದಲ್ಲಿ ನಿರತವಾಗಿದ್ದು ಕಂಡುಬಂದಿತು.

—ಈರಣ್ಣ ಬೆಂಗಾಲಿ, ರಾಯಚೂರು

## ಅಮ್ಮನ್ನ ಕಳಿಸೋದು

ಇದೇನಿದು, ಭಕ್ಷ್ಯಗಳ ಸಾಲು? ಹಳ್ಳಿಗಳಲ್ಲಿ ಜನರು ತಮ್ಮ ಕಷ್ಟ ಕೋಟಲೆ, ರೋಗ– ರುಜಿನಗಳನ್ನು ನಿವಾರಿಸಲೆಂದು ದೇವಿಯನ್ನು ಪ್ರಾರ್ಥಿಸಿ ಪ್ರತಿಯೊಬ್ಬರೂ ತಮ್ಮ ಮನೆಗಳಿಂದ ರೊಟ್ಟಿ, ಚಪಾತಿ, ಸಿಹಿ ತಯಾರಿಸಿ ತಂದು ಊರ ಹೊರಗಿಟ್ಟು ಹಿಂತಿರುಗಿ ಬರುತ್ತಾರೆ. ದೇವಿ ಸುಪ್ರೀತಳಾಗಿ ಊರಿನ ಕೆಟ್ಟದ್ದನ್ನೆಲ್ಲ ನಿವಾರಿಸುವಳೆಂಬ ನಂಬಿಕೆ. ಇದು ಹರಪನಹಳ್ಳಿಯ ಮೇಗಳಪೇಟೆಯ ನಾಗರಿಕರು ಅಮ್ಮನನ್ನು ಕಳಿಸಿದ ದೃಶ್ಯ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ





## ಮಾವೂ ಅಲ್ಲ, ಹಲಸೂ ಅಲ್ಲ...

ಮಾವಿನಹಣ್ಣಿನ ಗಾತ್ರ ಹಲಸಿನ ರೂಪದ ಈ ಹಣ್ಣಿನ ಹೆಸರು ಲಕ್ಷ್ಮಣ ಫಲ. ಸೀತಾಫಲ ರಾಮಫಲ ಇದ್ದಮೇಲೆ ಲಕ್ಷ್ಮಣ ಫಲ ಇಲ್ಲದಿದ್ದರೆ ಹೇಗೆ?

ಇದು ದಕ್ಷಿಣ ಕನ್ನಡ ಜಿಲ್ಲೆ ಉಪ್ಪಿನಂಗಡಿಯ ಸೂರ್ಯಂಬೈಲಿನಲ್ಲಿರುವ ನಮ್ಮ ಮನೆಯಂಗಳದ ಮರದಿಂದ ಇಳಿಸಿದ್ದು. ಗಿಡ ನೆಟ್ಟು ಮೂರೇ ವರ್ಷಕ್ಕೆ ಸಮೃದ್ಧ ಫಲ ನೀಡಿದೆ.

ಆಯುರ್ವೇದದಲ್ಲಿ ಉತ್ತಮ ಔಷಧೀಯ ಗುಣಗಳಿರುವ ಇದರ ವೈಜ್ಞಾನಿಕ ಹೆಸರು ಗ್ರಾವಿಯೋಲಾ. ಕ್ಯಾನ್ಸರ್ ಗುಣಪಡಿಸುವ ಸತ್ವ ಈ ಹಣ್ಣಿನಲ್ಲಿದೆ. ಅಲ್ಲದೆ ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುಣವೂ ಈ ಹಣ್ಣಿಗಿದೆ. ಇದರ ಮೂಲ ದಕ್ಷಿಣ ಅಮೆರಿಕ ಮತ್ತು ಆಫ್ರಿಕಾ ಆದರೂ ಭಾರತದ ಎಲ್ಲ ಭಾಗಗಳಲ್ಲೂ ಬೆಳೆಯುತ್ತದೆ.

—ಶಿವಭಟ್ ಸೂರ್ಯಂಬೈಲ್, ಉಪ್ಪಿನಂಗಡಿ